ಶ್ರೀ ಟಿ.ಎನ್. ನರಸಿಂಹಮೂರ್ತಿ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಮಂಗಳೂರು ಅಭಿವೃದ್ಧಿ ಮಂಡಳಿ ಹಂಚಿದ ನಿವೇಶನಗಳು ೨೧೧. ಮಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಂಚಿದ ನಿವೇಶನಗಳು--೪೬.

ಆ) ಈವರೆಗೆ ಯಾವುದೇ ಭೂಮಿಯನ್ನು ವಶಪಡಿಸಿಕೊಂಡಿರುವುದಿಲ್ಲ.

ರಾಜ್ಯದ ಹೊರಗಡೆ ಇರುವ ಕನ್ನಡ ಶಾಲೆಗಳ ಸಂಖ್ಯೆ

೧೧೮. ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ).—ಮಾನ್ಯ ಶಿಕ್ಷಣ, ಯುವಜನ ವ್ಯವಹಾರಗಳು, ಕ್ರೀಡೆಗಳು, ಕನ್ನಡ ಹಾಗೂ ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ಹೊರಗಡೆಯಿರುವ ಕನ್ನಡ ಶಾಲೆಗಳ ಸಂಖ್ಯೆ ಎಷ್ಟು ?

ಆ) ಹಾಗಿದ್ದಲ್ಲಿ, ಎಷ್ಟು ಶಾಲೆಗಳಿಗೆ ಸರ್ಕಾರ ಅನುದಾನ ಕೊಟ್ಟಿದೆ ? (ವಿವಿಧ ರಾಜ್ಯವಾರು ಅಂಕಿ ಅಂಶಗಳನ್ನು ಕೊಡುವುದು)

ಶ್ರೀ ಕೆ.ಹೆಚ್. ರಂಗನಾಥ್ (ಶಿಕ್ಷಣ ಮಂತ್ರಿಗಳು).—

ಅ) ರಾಜ್ಯದ ಹೊರಗಡೆಯಿರುವ ಕನ್ನಡ ಶಾಲೆಗಳ ಸಂಖ್ಯೆಯ ಬಗ್ಗೆ ಈಗ ಮಾಹಿತಿ ಇಲ್ಲ.

ಆ) ರಾಜ್ಯದ ಹೊರಗಡೆಯಿರುವ ಕನ್ನಡ ಶಾಲೆಗಳಿಗೆ ಶಿಕ್ಷಣ ಇಲಾಖೆಯಿಂದ ಯಾವುದೇ ಅನುದಾನವನ್ನು ನೀಡಲಾಗುತ್ತಿಲ್ಲ.

ವಿಶ್ವವಿದ್ಯಾನಿಲಯಗಳ ಬೋಧಕ ಹಾಗೂ ಬೋಧಕೇತರ ಹುದ್ದೆಗಳು

೪೩೪. ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ).—ಮಾನ್ಯ ಶಿಕ್ಷಣ, ಯುವಜನ ವ್ಯವಹಾರಗಳು ಕ್ರೀಡೆಗಳು, ಕನ್ನಡ ಹಾಗೂ ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ೬ ವಿಶ್ವವಿದ್ಯಾನಿಲಯಗಳಲ್ಲಿ ಬೋಧಕ ಹಾಗೂ ಬೋಧಕೇತರ ಹುದ್ದೆಗಳಿಗೆ ಮೀಸಲಾತಿ ಕಾನೂನಿನ ಪ್ರಕಾರ ಆಯ್ಕೆ ಮಾಡಲಾಗಿದೆಯೇ ?

ಆ) ಮಾಡಿದ್ದರೆ, ಪರಿಶಿಷ್ಟಜಾತಿ, ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗದವರಿಗೆ ಮೀಸಲಾತಿ ದೊರೆತಿದೆಯೇ (ವಿಶ್ವವಿದ್ಯಾನಿಲಯವಾರು ಅಂಕಿ ಅಂಶಗಳನ್ನು ಕೊಡುವುದು) ?

ಇ) ಇಲ್ಲದಿದ್ದಲ್ಲಿ ಈ ವರ್ಗದ ಜನರಿಗೆ ನ್ಯಾಯ ದೊರಕಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ಕೆ.ಹೆಚ್. ರಂಗನಾಥ್ (ಶಿಕ್ಷಣ ಮಂತ್ರಿಗಳು).—

ಅ) ಹೌದು.

ಆ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಮೀಸಲಾತಿಯು ಕೆಲವು ಬಾರಿ ಶೇಕಡ ೧೮ ಕ್ಕಿಂತ ಕಡಿಮೆಯಾಗಿದೆ. ಏಕೆಂದರೆ ಮೀಸಲಾತಿ ನಿಬಂಧನೆಗಳನ್ನು ಪಾಲಿಸುವಾಗ ಸೂಕ್ತ ಅಭ್ಯರ್ಥಿಗಳಿಲ್ಲದ ಕಾರಣ ಬೇರೆ ಜಾತಿಯವರನ್ನು ತೆಗೆದುಕೊಳ್ಳಲಾಗುತ್ತಿತ್ತು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಆಯ್ಕೆಯ ಶೇಕಡಾವಾರು ಅಂಕಿ ಅಂಶಗಳನ್ನು ಈ ಕೆಳಗೆ ಕೊಡಲಾಗಿದೆ. ಹಿಂದುಳಿದ ವರ್ಗಗಳ ಅಂಕಿ ಅಂಶಗಳು ಲಭ್ಯವಿಲ್ಲದ ಕಾರಣ ನಂತರ ತಿಳಿಸಲಾಗುವುದು.

ವಿಶ್ವವಿದ್ಯಾನಿಲಯದ ಹೆಸರು	ಬೋಧಕ ಪ.ಜಾ/ಪ.ವ	ಬೋಧಕೇತರ ಪ.ಜಾ/ಪ.ವ
ಮೈಸೂರು	೧೦.೬೩	೧೨.೬೭
ಗುಲ್ಬರ್ಗಾ	೧೦.೭	೨೨.೪
ಮಂಗಳೂರು	೫	೨೬.೮
ಬೆಂಗಳೂರು	೫.೪೨	೮.೪೪
ಕುವೆಂಪು	೫.೧	೩೦
ಕರ್ನಾಟಕ	೬	೭.೫

ಇ) ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಎಲ್ಲಾ ಅಂಗ ಸಂಸ್ಥೆಗಳಿಗೆ ಅನ್ವಯವಾಗುವ ಸರ್ಕಾರಿ ಆದೇಶ ಸಂಖ್ಯೆ ಡಿಪಿಎಆರ್ ೧೯ ಎಸ್‌ಬಿಸಿ ೮೭, ದಿನಾಂಕ ೧೨-೭-೮೯ರಲ್ಲಿ ವಿವಿಧ ವರ್ಗಗಳಿಗೆ ಮೀಸಲಿಟ್ಟಿರುವ ಸ್ಥಾನಗಳನ್ನು ಬೇರೆ ಜಾತಿಯವರಿಂದ ತುಂಬ ಬಾರದೆಂಬ ಷರತ್ತು ಹಾಕಲಾಗಿದೆ. ಹಾಗೂ ಇದೇ ಆದೇಶದಂತೆ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳಿಗೆ ನೇರ ನೇಮಕಾತಿಗಾಗಿ ಮೀಸಲಿಟ್ಟ ಸ್ಥಾನಗಳನ್ನು ಯಾವುದೇ ಕಾರಣಕ್ಕಾಗಿ ತುಂಬಲಾಗದಿದ್ದಲ್ಲಿ ಅವುಗಳನ್ನು ಬಾಕಿ ಉಳಿದಿವೆಯೆಂದು ಪರಿಗಣಿಸಲು ಮತ್ತು ಅವುಗಳನ್ನು ಮುಂದಕ್ಕೆ ಕಾಯ್ದಿರಿಸಬೇಕಾಗಿದೆ.

ರಾಜ್ಯದಲ್ಲಿ ಒಣಭೂಮಿ ಅಭಿವೃದ್ಧಿ ನಿಗಮಗಳು

೪೫೯. ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ).—ಮಾನ್ಯ ವ್ಯವಸಾಯ ಮತ್ತು ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಎಷ್ಟು ಒಣಭೂಮಿ ಅಭಿವೃದ್ಧಿ ನಿಗಮಗಳು ಅಸ್ತಿತ್ವದಲ್ಲಿವೆ ?

ಆ) ಇವುಗಳು ಸಮರ್ಪಕವಾಗಿ ಕೆಲಸ ಮಾಡುತ್ತಿವೆಯೇ ?

ಇ) ಈ ನಿಗಮಗಳು ಇನ್ನೂ ಹೆಚ್ಚಿನ ರೀತಿಯಲ್ಲಿ ಸಮರ್ಪಕವಾಗಿ ಕಾರ್ಯ ನಿರ್ವಹಿಸುವಂತೆ ಮಾಡಲು ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ಎಸ್. ಬಂಗಾರಪ್ಪ (ಕೃಷಿ ಮತ್ತು ತೋಟಗಾರಿಕೆ ಸಚಿವರು).—

ಅ) ನಾಲ್ಕು.

ಆ) ಹೌದು ಸ್ವಾಮಿ.

ಇ) ಈ ಬಗ್ಗೆ ಕೆಲವೊಂದು ಪ್ರಸ್ತಾವನೆಗಳು ಸರ್ಕಾರದ ಪರಿಶೀಲನೆಯಲ್ಲಿದೆ.

ಮಂಗಳೂರು ವಿಶ್ವವಿದ್ಯಾಲಯದ ಮೆಚ್ಚ

೫೬೨. ಶ್ರೀ ಬಿ. ಎಂ. ಇದಿನಬ್ಬ (ಮಾನ್ಯ ಶಿಕ್ಷಣ ಯುವಜನ ವ್ಯವಹಾರಗಳು, ಕ್ರೀಡೆಗಳು, ಕನ್ನಡ ಹಾಗೂ ಸಂಸ್ಕೃತಿ ಮಂತ್ರಿಗಳು) ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ೧೯೮೭–೮೮, ೮೮–೮೯, ೮೯–೯೦ರಲ್ಲಿ ಸರ್ಕಾರವು ಎಷ್ಟು ಹಣ ಮೆಚ್ಚ ಮಾಡಿದೆ ?

ಆ) ೧೯೯೦–೯೧ನೇ ಸಾಲಿನಲ್ಲಿ ಒದಗಿಸಿದ ಹಣ ಎಷ್ಟು ?

ಇ) ಈವರೆವಿಗೂ ಖರ್ಚು ಮಾಡಿದ ಹಣದಿಂದಾದ ಸಾಧಿಸಿದ ಪ್ರಗತಿ ಎಷ್ಟು ?

ಈ) ಈ ವಿಶ್ವವಿದ್ಯಾಲಯಕ್ಕೆ ಯು.ಜಿ.ಸಿ. ಗ್ರಾಂಟ್ ದೊರೆಯುತ್ತಿದೆಯೇ ಹಾಗಿದ್ದಲ್ಲಿ ಎಷ್ಟು ?